**<u>ದಿನಾಂಕಃ 04.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಆರ್.ಜಿ.ಪಿ. ವಕೀಲರಿಂದಃ</u>**

ಸಾಕ್ಷಿಯು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣಾ ಹೇಳಿಕೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿನ ಎಲ್ಲಾ ಸಂಗತಿಗಳು ತಮಗೆ ತಿಳಿದಿದೆ ಮತ್ತು ಸತ್ಯವಾಗಿದೆ ಎಂದು ಹೇಳಿ, ಪ್ರಮಾಣ ಪತ್ರದಲ್ಲಿನ ಸಹಿ ತಮ್ಮದೆಂದು ಗುರುತಿಸಿರುತ್ತಾರೆ.

1) ಸಾಕ್ಷಿಯು ನಿಪಿ.1 ರ ಕರಾರು ಪತ್ರದ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.1ಸಿ ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ- ಇಲ್ಲ.**

**<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.ಹೆಚ್.ಎಸ್.ಹೆಚ್. ವಕೀಲರಿಂದಃ-</u>**

1) ನಿಪಿ.1 ರ ಕರಾರು ಪತ್ರದಲ್ಲಿನ ಸ್ವತ್ತಿನ ಖಾತೆಯು ಜಂಟಿ ಹೆಸರಿನಲ್ಲಿ ಇರುವ ಬಗ್ಗೆ ತಿಳಿಸಿರುವುದಿಲ್ಲ. ನಿಪಿ.1 ರ ಪತ್ರದ ಮುದ್ರಾಂಕ ಶುಲ್ಕವನ್ನು ಯಾರು ಪಾವತಿ ಮಾಡಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಿಪಿ.1 ರ ಕರಾರು ಪತ್ರದ ಪ್ರತಿ ಪುಟಗಳಿಗೂ ಪಕ್ಷಗಾರರ ಸಹಿ ಪಡೆದಿರುವುದಿಲ್ಲ. ನಿಪಿ.1 ರ ಕರಾರು ಪತ್ರದಲ್ಲಿ ಇರುವ ಹೆಬ್ಬೆಟ್ಟಿನ ಗುರುತನ್ನು ಯಾರು ಹಾಕಿರುತ್ತಾರೆ ಎಂದು ನಾನು ಗುರುತಿಸಿರುವುದಿಲ್ಲ. ನಿಪಿ.1 ರ ಕರಾರು ಪತ್ರದಲ್ಲಿ ಎಷ್ಟು ತಪ್ಪುಗಳು ಆಗಿವೆ ಮತ್ತು ಎಲ್ಲಿ ಎರಡೆರಡು ಬಾರಿ ಪದಗಳಲ್ಲಿ ತಿದ್ದಿ ಬರೆಯಲಾಗಿದೆ ಎಂಬ ಬಗ್ಗೆ ನಮೂದು ಮಾಡಿಲ್ಲ. ನಿಪಿ.1 ರ ಕರಾರು ಪತ್ರವನ್ನು ತಯಾರಿಸುವ ಕಾಲಕ್ಕೆ ಪಕ್ಷಗಾರರ ಆಧಾರ್ ಕಾರ್ಡ ಪಡೆದಿಲ್ಲ ಮತ್ತು ಆಧಾರ್ ಕಾರ್ಡ ನಂಬರ್ ನಮೂದು ಮಾಡಿರುವುದಿಲ್ಲ. ನಿಪಿ.1 ರ ಕರಾರನ್ನು ನೋಂದಾಯಿಸಿಕೊಳ್ಳಲು ಪಕ್ಷಗಾರರಿಗೆ ನಾನು ತಿಳಿಸಿರುವುದಿಲ್ಲ. ನಿಪಿ.1 ರ ಕರಾರು ಪತ್ರದಲ್ಲಿನ ಆಸ್ತಿಯು ಜಂಟಿ ಖಾತೆಯಲ್ಲಿ ಇರುವ ಕಾರಣ ಅದನ್ನು ನೋಂದಾಯಿಸಲು ಆಗುವುದಿಲ್ಲ ಎಂದು ನಾನು ಮತ್ತು ವಾದಿ ತಿಳಿದು ಪ್ರತಿವಾದಿಗೆ ಮೋಸ ಮಾಡಲು ಅದನ್ನು ನೋಂದಾಯಿಸಿಲ್ಲ ಎಂದರೆ ಸರಿಯಲ್ಲ. ನಿಪಿ.1 ರ ಕರಾರು ಪತ್ರಕ್ಕೆ ಸಹಿ ಮಾಡಿದ ಸಾಕ್ಷಿದಾರರನ್ನು ನಾನು ವಿಚಾರಣೆ ಮಾಡಿಲ್ಲ.

2) ನಿಪಿ.1 ರ ಕರಾರು ಪತ್ರವನ್ನು ತಯಾರಿಸುವ ಪೂರ್ವದಲ್ಲಿ ನನ್ನ ಸಮಕ್ಷಮ ಪಕ್ಷಗಾರರು ಯಾವುದೇ ವ್ಯವಹಾರದ ಮಾತುಕತೆ ಮಾಡಿರುವುದಿಲ್ಲ. ಹಣಕಾಸಿನ ವ್ಯವಹಾರಕ್ಕಾಗಿ ನಿಪಿ.1 ರ ಕರಾರು ಪತ್ರವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಪತ್ರವನ್ನು ತಯಾರಿಸಿದ ಉದ್ದೇಶ ಮತ್ತು ವ್ಯವಹಾರದ ಬಗ್ಗೆ ನನಗೆ ತಿಳಿಯದೇ ಇದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**